ವೀರಪ್ಪನನ್ನು ಸೆರೆಹಿಡಿಯುವುದರ ಬಗ್ಗೆ

1885 (2538) ಶ್ರೀ ಸುಬ್ಬಾರೆಡ್ಡಿ. ಕೆ.ಎನ್. (ಬಸವನಗುಡಿ):

ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಕಾಡುಗಳ್ಳ ವೀರಪ್ಪನನ್ನು ಸೆರೆ ಹಿಡಿಯಲು ಕಳೆದ ಎರಡು ವರ್ಷಗಳಲ್ಲಿ ಸರ್ಕಾರ ಭರಿಸಿದ ವೆಚ್ಚವೆಷ್ಟು;

(ಆ) ವೀರಪ್ಪನನ್ನು ಸೆರೆ ಹಿಡಿಯಲು ಪೊಲೀಸ್ ಪಡೆಯ ಕಾರ್ಯಾಚರಣೆ ಬಗ್ಗೆ ವಿವರ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು)

(ಅ) ವಿವರಗಳು ಈ ಕೆಳಕಂಡಂತಿದೆ.

1998-99	ರೂ.1,30,67,920-00
1999-2000	ರೂ.1,40,21,280-00
(29-2-2000 ರವರೆಗೆ)	
ಒಟ್ಟು	ರೂ.2,70,89,200-00

(ಆ) ವೀರಪ್ಪನ್ ಗುಂಪು 1984ರಿಂದ ಕರ್ನಾಟಕ ಮತ್ತು ತಮಿಳುನಾಡಿನ ಅರಣ್ಯ ಅಂಚಿನಲ್ಲಿ ತನ್ನ ದುಷ್ಕೃತ್ಯಗಳನ್ನು ನಡೆಸುತ್ತಾ ಬಂದಿದೆ. ಪ್ರಾರಂಭದಲ್ಲಿ ಈ ಗುಂಪು ದಂತಕ್ಕಾಗಿ ಆನೆಗಳನ್ನು ಕೊಲ್ಲುವುದು ಮತ್ತು ಗಂಧದ ಮರಗಳನ್ನು ಕಳ್ಳ ಸಾಗಾಣಿಕೆ ಮಾಡುವುದನ್ನು ಭಾರಿ ಪ್ರಮಾಣದಲ್ಲಿ ಮಾಡುತ್ತಿತ್ತು ನಂತರ ಇವರು ತಮ್ಮ ಗುಂಪಿನ ದುಷ್ಕೃತ್ಯಗಳು ಮತ್ತು ಭಯೋತ್ಪಾದಕ ಚಟುವಟಿಕೆಗಳನ್ನು ಹತ್ತಿಕ್ಕುವಲ್ಲಿ ಕಾರ್ಯ ಪ್ರವೃತ್ತರಾದ ಪೊಲೀಸ್ ಅಧಿಕಾರಿಗಳು, ಅರಣ್ಯ ಅಧಿಕಾರಿಗಳು, ಹಾಗೂ ಮಾಹಿತಿದಾರರುಗಳನ್ನು ಕೊಲೆ ಮಾಡಲು ಪ್ರಾರಂಭಿಸಿದರು. ಇವರು ಭಯೋತ್ಪಾದಕ ಚಟುವಟಿಕೆಗಳು ಹಾಗೂ ದುಷ್ಕೃತ್ಯಗಳನ್ನು ತೀವ್ರವಾಗಿ ಪರಿಗಣಿಸಿದ ಸರ್ಕಾರವು ಇವರ ನಿಗ್ರಹಕ್ಕಾಗಿ ಕಾರ್ಯಾಚರಣೆ ಪಡೆಯನ್ನು ನಿಯೋಜಿಸಿತು. ಅಂದಿನಿಂದ ಕಾರ್ಯಾಚರಣೆ ಪಡೆಯು ಈ ಗುಂಪನ್ನು ಸೆರೆ ಹಿಡಿಯಲು ತೀವ್ರ ಪ್ರಯತ್ನಗಳನ್ನು ನಡೆಸುತ್ತಿದೆ.

ವೀರಪ್ಪನ್ ಗುಂಪು ಕರ್ನಾಟಕ ಮತ್ತು ತಮಿಳು ನಾಡಿನ ಪೊಲೀಸ್ ಹಾಗೂ ಅರಣ್ಯ ಅಧಿಕಾರಿಗಳನ್ನು ಒಳಗೊಂಡಂತೆ ಈವರೆಗೆ 121 ಜನರನ್ನು ಕೊಂದಿರುತ್ತದೆ. ಒಟ್ಟು 140 ಪ್ರಕರಣಗಳು (ಕರ್ನಾಟಕ-61, ತಮಿಳುನಾಡು- 79) ಈ ಗುಂಪಿನ ವಿರುದ್ಧ ದಾಖಲಾಗಿದೆ. ಕರ್ನಾಟಕ -60 ಪ್ರಕರಣಗಳಲ್ಲಿ 5 ಪ್ರಕರಣಗಳು ಟಾಡಾ ಪ್ರಕರಣಗಳಡಿಯಲ್ಲಿ ದಾಖಲಾಗಿದೆ. ಈ ಟಾಡಾ ಪ್ರಕರಣಗಳಲ್ಲಿ ಒಟ್ಟು 127 ಜನರನ್ನು ದಸ್ತಗಿರಿ ಮಾಡಲಾಗಿರುತ್ತದೆ. 60 ಜನ ಗುಂಪಿನ ಸದಸ್ಯರುಗಳು ಕಾರ್ಯಾಚರಣೆ ಪಡೆಯೊಡನೆ ನಡೆದ ಗುಂಡಿನ ಚಕಮಕಿಗಳಲ್ಲಿ ಮೃತಪಟ್ಟಿರುತ್ತಾರೆ. ಇಬ್ಬರು ಗುಂಪಿನ ಮುಖ್ಯ ಸದಸ್ಯರುಗಳು ಕಾರ್ಯಾಚರಣೆ ಪಡೆಯಿಂದ ದಸ್ತಗಿರಿ ತಪ್ಪಿಸಿಕೊಳ್ಳುವ ಹವಣಿಕೆಯಲ್ಲಿ ಆತ್ಮಹತ್ಯೆ ಮಾಡಿಕೊಂಡು ಮೃತಪಟ್ಟಿರುತ್ತಾರೆ. ಎಡೆಬಿಡದೆ

ಕಾರ್ಯಾಚರಣೆಯಿಂದ ಗುಂಪಿನವರಿಂದ ಅಪಾರವಾದ ಶಸ್ತ್ರಗಳನ್ನು ವಶಪಡಿಸಿಕೊಂಡಿರುತ್ತಾರೆ. ತೀವ್ರತರವಾದ ಕಾರ್ಯಾಚರಣೆಯನ್ನು ನಡೆಸಿ ಪ್ರಾರಂಭದಲ್ಲಿ 150ಜನ ಸದಸ್ಯರಿದ್ದ ವೀರಪ್ಪನ್ ಗುಂಪನ್ನು ಕೇವಲ ಇಬ್ಬರು ಸದಸ್ಯರಿಗೆ ಇಳಿಸಲಾಗಿದೆ. ಹಾಲಿ ಗುಂಪಿನಲ್ಲಿ ವೀರಪ್ಪನ್ ಹಾಗೂ ಆತನ ಬಲಗೈ ಭಂಟ ಸೇತುಕುಳಿ ಗೋವಿಂದ ಇವರುಗಳು ಮಾತ್ರ ಹೊಸದಾಗಿ ಸೇರಿರುವ ಕೆಲವು ಸದಸ್ಯರೊಂದಿಗೆ ಇರುತ್ತಾರೆ. ಗುಂಪು ಸಂಪೂರ್ಣ ನಿಷ್ಕ್ರಿಯವಾಗಿದ್ದು ಕಾರ್ಯಾಚರಣೆ ಪಡೆಯಿಂದ ತಪ್ಪಿಸಿಕೊಳ್ಳುವ ಸಲುವಾಗಿ ತಮಿಳು ನಾಡಿನ ದಟ್ಟ ಅರಣ್ಯದಲ್ಲಿ ಅಡಗಿರುತ್ತದೆ.

ರಾಜ್ಯದಲ್ಲಿ ಹೊಸದಾಗಿ ಪೊಲೀಸ್ ಠಾಣೆಗಳನ್ನು ತೆರೆಯುತ್ತಿರುವ ವಿವರ

1888 (2525) ಶ್ರೀ ಬಿ.ಬಿ. ಶಿವಪ್ಪ (ಸಕಲೇಶಪುರ):

ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ರಾಜ್ಯದಲ್ಲಿ ನೂತನವಾಗಿ ತೆರೆಯಲು ಉದ್ದೇಶಿಸಿರುವ ಪೊಲೀಸ್ ಠಾಣೆಗಳು ಎಷ್ಟು; ಎಲ್ಲೆಲ್ಲಿ ತೆರೆಯಲಾಗುವುದು

(ಆ) ಅವುಗಳಲ್ಲಿ ಹಾಸನ ಜಿಲ್ಲೆಯಲ್ಲಿ ಹೊಸದಾಗಿ ಪ್ರಸಕ್ತ ಸಾಲಿನಲ್ಲಿ ಎಷ್ಟು ಪೊಲೀಸ್ ಠಾಣೆ ತೆರೆಯಲಾಗುವುದು ತಾಲ್ಲೂಕುವಾರು ವಿವರ ನೀಡುವುದು?

ಶೀ ಮಲ್ಲಿಕಾರ್ಜುನ ಖರ್ಗೆ.ಎಂ (ಗೃಹ ಸಚಿವರು)

(ಅ) ಪ್ರಸಕ್ತ ಆರ್ಥಿಕ ವರ್ಷದಲ್ಲಿ 10 ಪೊಲೀಸ್ ಠಾಣೆಗಳನ್ನು ತೆರೆಯಲುದ್ದೇಶಿಸಲಾಗಿದೆ. ಪೊಲೀಸ್ ಠಾಣೆಗಳು ಅತ್ಯಗತ್ಯವಿರುವಂತಹ ಸ್ಥಳಗಳನ್ನು ಗುರುತಿಸಿ, ಅಂತಹ ಸ್ಥಳಗಳಲ್ಲಿ ಪೊಲೀಸು ಠಾಣೆಗಳನ್ನು ತೆರೆಯಲಾಗುವುದು.

ಹಾಸನ ಜಿಲ್ಲೆಯಲ್ಲಿರುವ ಆರಕ್ಷಕ ಠಾಣೆಗಳ ಕುರಿತು

1889 (2524) ಶ್ರೀ ಬಿ.ಬಿ. ಶಿವಪ್ಪ (ಸಕಲೇಶ್‌ಪುರ):

ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಹಾಸನ ಜಿಲ್ಲೆಯಲ್ಲಿರುವ ಆರಕ್ಷಕ ಠಾಣೆಗಳ ಸಂಖ್ಯೆ ಎಷ್ಟು;

(ಆ) ಹಾಸನ ಜಿಲ್ಲೆಯಲ್ಲಿನ ಆರಕ್ಷಕ ಠಾಣೆಗಳಲ್ಲಿ ಸಿಬ್ಬಂದಿಯ ಕೊರತೆ ಇರುವುದು ಸರ್ಕಾರದ9 ಗಮನಕ್ಕೆ ಬಂದಿದೆಯೆ;

(ಇ) ಹಾಗಿದ್ದಲ್ಲಿ ಹಾಸನ ಜಿಲ್ಲೆಯಲ್ಲಿನ ಆರಕ್ಷಕ ಠಾಣೆಗಳ ಸಿಬ್ಬಂದಿ ಕೊರತೆಯನ್ನು ನಿವಾರಿಸಲು ಸರ್ಕಾರವು ಕೈಗೊಂಡಿರುವ ಕ್ರಮವೇನು?